


**ರಾಮಮನೋಹರ ಲೋಹಿಯಾ ಜೀವನಯಾನ**

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ದಕ್ಕಿದ ಹೋರಾಟ ರಾಜಕಾರಣ; ತಪ್ಪಿದ ಮಹಾ ಚಾರಿತ್ರಿಕ ಸಂಗಮ

ಲೋಹಿಯಾ ವಿಶ್ವ ಪ್ರವಾಸ ಮುಗಿಸಿ ಬರುವ ಹೊತ್ತಿಗೆ ಭಾರತ ಹೊಸ ರಾಜಕೀಯ ಅನುಭವಗಳಿಗೆ ಹಾಗೂ ಹೊಸ ಪ್ರಯೋಗಗಳಿಗೆ ಅಣಿಯಾಗುತ್ತಿತ್ತು. ಇಸವಿ 1952. ಕಾಂಗ್ರೆಸ್, ಕಮ್ಯುನಿಸ್ಟ್, ಸಮಾಜವಾದಿ ಮುಂತಾದ ಅನೇಕ ಪಕ್ಷಗಳು ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಪ್ರಥಮ ಸಾರ್ವತ್ರಿಕ ಚುನಾವಣೆಗೆ ಸಜ್ಜಾಗತೊಡಗಿದ್ದವು.

ಅಷ್ಟೊತ್ತಿಗಾಗಲೇ ಅಧಿಕಾರ ಅನುಭವಿಸಿದ್ದ ಕಾಂಗ್ರೆಸ್ ಸುಭದ್ರ ಸ್ಥಾನದಲ್ಲಿತ್ತು. ಸಮಾಜವಾದಿ ಪಕ್ಷ ಭೂ ಹಂಚಿಕೆಯಿಂದ ಹಿಡಿದು ಮೂಲಭೂತ ಆರ್ಥಿಕ, ಸಾಮಾಜಿಕ ಪರಿವರ್ತನೆಗಳನ್ನು ತರುವುದೇ ರಾಜಕೀಯದ ಉದ್ದೇಶ ಎಂದು ಹೊರಟಿತ್ತು. ಸಮಾಜವಾದಿ ಪಕ್ಷದ ಸವಾಲುಗಳು ಉಳಿದ ಪಕ್ಷಗಳಿಗಿಂತ ಭಿನ್ನವಾಗಿದ್ದವು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗಿಯಾಗಿದ್ದ ಸಮಾಜವಾದಿ ನಾಯಕರಿಗೆ ಸಮಾಜವಾದಿ ರಾಜಕಾರಣ ಸ್ವಾತಂತ್ರ್ಯ ಚಳುವಳಿಯ ಮುಂದುವರಿಕೆಯಾಗಿತ್ತು.

ಸಮಾಜವಾದಿ ಪಕ್ಷದ ಮುಖ್ಯ ತಾತ್ವಿಕರಲ್ಲೊಬ್ಬರಾಗಿದ್ದ ಲೋಹಿಯಾಗೆ ಹೊಸ ರಾಜಕಾರಣದ ಜೊತೆಗೆ ಸಮಾಜವಾದಿ ನೈತಿಕತೆ, ಹೊಸ ರಾಜಕೀಯ ಭಾಷೆ, ಧೋರಣೆಗಳನ್ನು ರೂಪಿಸಬೇಕಾದ ಅಗತ್ಯವೂ ಇತ್ತು. ಒಂದೆಡೆ ಫ್ಯೂಡಲ್ ಶಕ್ತಿಗಳು ಹಾಗೂ ವ್ಯಾಪಾರಿ ವಲಯ; ಮತ್ತೊಂದೆಡೆ ಜಾತಿ ಮನಸ್ಸು; ಇನ್ನೊಂದೆಡೆ ಗೊಡ್ಡು ಸಂಪ್ರದಾಯಗಳು ಭಾರತದ ರಾಜಕಾರಣವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದವು. ಇವೆಲ್ಲವನ್ನೂ ಎದುರಿಸಲು ಗಟ್ಟಿ ತಾತ್ವಿಕತೆಯುಳ್ಳ ಕಾರ್ಯಕರ್ತರನ್ನು ಪಕ್ಷ ತಯಾರು ಮಾಡಬೇಕಾಗಿತ್ತು.

ಲೋಹಿಯಾ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸದೆ,

